O.S .No.118/2019
PW-1

ದಿನಾಂಕ: 27.01.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಬಿ.ಎ.ಎಸ್. ವಕೀಲರಿಂದಃ

ನಾನು ಈಗ್ಗೆ 20 ವರ್ಷದಿಂದ ಬೆಳವಾಡಿಯಲ್ಲಿ ವಾಸವಿರುತ್ತೇನೆ. ಬೆಳವಡಿಗಿಂತ ಮುಂಚಿತವಾಗಿ ಹಳೆಪೆಂಜಳ್ಳಿಯಲ್ಲಿ ವಾಸವಾಗಿದ್ದೆ. ನಾನು ಜಿ.ಟಿ.ಟಿ.ಸಿ ಪ್ಯಾಕ್ಟರಿಯಲ್ಲಿ 20 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ನೀವು ಹಳೆಪೆಂಜಳ್ಳಿಯಲ್ಲಿ ವಾಸ ಇದ್ದ ಬಗ್ಗೆ ದಾಖಲಾತಿ ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ತಂದೆ-ತಾಯಿ ಸಹ ಬೆಳವಡಿಯಲ್ಲಿ ನಿಮ್ಮ ಜೊತೆ ವಾಸ ಇದ್ದಾರೆಂದರೆ ಸರಿ. ನಿಮ್ಮ ತಾತನ ಹೆಸರು ಕರ್ಪಯ್ಯ ಎಂದರೆ ಸಾಕ್ಷಿ ನನ್ನ ತಾತನಿಗೆ ರಾಮಯ್ಯ ಮತ್ತು ಕರ್ಪಯ್ಯ ಎಂಬ ಎರಡು ಹೆಸರುಗಳಿವೆ ಎಂದು ಹೇಳುತ್ತಾರೆ. ನಿಮ್ಮ ತಾತನಿಗೆ ರಾಮಯ್ಯ ಮತ್ತು ಕರ್ಪಯ್ಯ ಎಂಬ ಎರಡು ಹೆಸರುಗಳಿವೆಂದು ತೋರಿಸಲು ದಾಖಲಾತಿ ಇದೆಯೇ ಎಂದರೆ ಸಾಕ್ಷಿ ಇದೆ ಎಂದು ಹೇಳುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಪಡಿಸಿದ್ದೇನೆ ಎಂದು ಹೇಳುತ್ತಾರೆ. ಏನು ದಾಖಲಾತಿ ಇದೆ ಎಂದರೆ ಸಾಕ್ಷಿ ಏನು ಇಲ್ಲ ಎಂದು ಹೇಳುತ್ತಾರೆ.

ನನ್ನ ತಾಯಿಗೆ 76 ವರ್ಷ ವಯಸ್ಸಾಗಿದೆ. ನಿಮ್ಮ ತಾಯಿ ಆರೋಗ್ಯವಾಗಿದ್ದಾರೆಂದರೆ ಸರಿಯಲ್ಲ. ನನ್ನ ತಂದೆಗೆ 80 ವರ್ಷ ವಯಸ್ಸಾಗಿದ್ದು, ಬದುಕಿದ್ದಾರೆ. ನಿಮ್ಮ ತಂದೆ-ತಾಯಿಗೆ ಯಾವುದೇ ಖಾಯಿಲೆಗಳು ಇಲ್ಲ, ಚೆನ್ನಾಗಿದ್ದಾರೆಂದರೆ ಸಾಕ್ಷಿ ಶುಗರ್, ಬಿ.ಪಿ ಖಾಯಿಲೆಗಳು, ಕಣ್ಣು ಕಾಣಿಸದೇ ಇರುವುದರಿಂದ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಹೇಳುತ್ತಾರೆ. ನಿಮ್ಮ ತಂದೆ-ತಾಯಿಗೆ ಕಣ್ಣು ಕಾಣದೇ ಇರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ.

ನನ್ನ ತಾಯಿ ನನಗೆ ನಿಪಿ-1 ರಂತೆ ದಿಃ 20.10.2017 ರಂದು ಮುಖ್ತಾರುನಾಮೆಯನ್ನು ನೀಡಿರುತ್ತಾರೆ. ನಿಪಿ-1 ನ್ನು ತಾಲ್ಲೂಕು ಕಚೇರಿ, ಹುಣಸೂರಿನಲ್ಲಿ ಬರೆಯಲಾಯಿತು. ನಿಪಿ-1 ನ್ನು ಬರೆಯುವ ಕಾಲಕ್ಕೆ ನನ್ನ ತಾಯಿ-ತಂದೆ ಇಬ್ಬರು ಹಾಜರಿದ್ದರು. ನಿಮ್ಮ ತಾಯಿ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದರೆ ಸತ್ಯಾಂಶ

ಗೊತ್ತಾಗುತ್ತದೆ ಎಂಬ ಕಾರಣಕ್ಕಾಗಿ, ನೀವು ಮುಖ್ತಾರುನಾಮೆಯನ್ನು ಪಡೆದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಯಾವ ದಿನಾಂಕ, ತಿಂಗಳು, ವರ್ಷದಂದು ನಿಮ್ಮ ತಂದೆಗೆ ದರಕಾಸ್ತು ಬಂತು ಎಂದರೆ ಸಾಕ್ಷಿ 1981-82 ರಲ್ಲಿ ಮುತ್ತಯ್ಯ@ಪಟ್ಟಯ್ಯ ಎಂಬುವವರ ಹೆಸರಿನಲ್ಲಿ ದರಕಾಸ್ತು ಬಂದಿರುತ್ತದೆ ಎಂದು ಹೇಳುತ್ತಾರೆ. ದರಕಾಸ್ತು ಬಂದ ಬಗ್ಗೆ ಸಾಗುವಳಿ ಚೀಟಿಯನ್ನು ಕೊಟ್ಟಿದ್ದರಾ ಎಂದರೆ ಸಾಕ್ಷಿ ಕೊಟ್ಟಿದ್ದರು ಎಂದು ಹೇಳುತ್ತಾರೆ. ಸದರಿ ಮೂಲ ಸಾಗುವಳಿ ಏನಾಯಿತು ಎಂದರೆ ಸಾಕ್ಷಿ ನನ್ನ ಚಿಕ್ಕಪ್ಪ ನನ್ನ ತಂದೆಗೆ ಕೊಡದಂಗೆ ಎತ್ತಿ ಇಟ್ಟುಕೊಂಡಿದ್ದು, ಅದ್ದಕಾಗಿ ನ್ಯಾಯಾಲಯಕ್ಕೆ ಬಂದಿರುತ್ತೇವೆ ಎಂದು ಹೇಳುತ್ತಾರೆ. ಸದರಿ ವಿಚಾರವನ್ನು ನಿಮ್ಮ ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ಬರೆಸಿದ್ದೇನೆ ಎಂದು ಹೇಳುತ್ತಾರೆ. ವಾದ ಪತ್ರವನ್ನು ಬರೆಯಲು ಮಾಹಿತಿಯನ್ನು ನನ್ನ ತಾಯಿಯ ಪರವಾಗಿ ನನ್ನ ತಾಯಿಯಿಂದ ಕೇಳಿಕೊಂಡು ನಾನು ವಕೀಲರಿಗೆ ಮಾಹಿತಿ ನೀಡಿರುತ್ತೇನೆ ಎಂದು ಹೇಳುತ್ತಾರೆ. ಸಾಗುವಳಿ ನೀಡಿದ ಕಾಲಕ್ಕೆ ನನಗೆ 15 ವರ್ಷ. ಈಗ ನನಗೆ 55 ವರ್ಷ ವಯಸ್ಸಾಗಿದೆ.

**( ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.